**ಸಾಕ್ಷಿಯನ್ನು ದಿಃ 02-07-2024 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈ ಆರ್ ಹೆಚ್ ವಕೀಲರಿಂದ.**

ನಾನು ನಾಲ್ಕನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ.ನಾನು 1948 ರಲ್ಲಿ ಹುಟ್ಟಿರುತ್ತೇನೆ. ಬೋರೇಗೌಡ ನಮ್ಮ ಕುಟುಂಬದ ಮೂಲ ಪುರುಷ ಅವರಿಗೆ ಮೂರು ಜನ ಗಂಡು ಮಕ್ಕಳು, ಅವರಿಗೆ ಗವಿಯಪ್ಪ, ಬೆಟ್ಟಯ್ಯ, ನಂಜಯ್ಯ ಎಂಬ ಮೂರು ಜನ ಗಂಡು ಮಕ್ಕಳು ಇದ್ದಾರೆ. ನಿಪಿ-1 ರಲ್ಲಿ ಗವಿಯಪ್ಪ, ಬೆಟ್ಟಯ್ಯ, ನಂಜಯ್ಯ ರವರ ಹೆಸರುಗಳನ್ನು ಬರೆಸಿರುತ್ತೇವೆ. ನಮ್ಮ ತಾತನ ಹೆಸರು ನಂಜಯ್ಯ. ಸದರಿ ಮೂರು ಜನ ಮಕ್ಕಳು ಕುಟುಂಬದ ಆಸ್ತಿಯಲ್ಲಿ ವಿಭಾಗ ಮಾಡಿ ಕೊಂಡಿದ್ದು, ಅದರ ವಿಸ್ತೀರ್ಣಗಳು ಗೊತ್ತಿರುವುದಿಲ್ಲ.ನಂಜಯ್ಯನಿಗೆ ಒಬ್ಬರೇ ನಂಜಮ್ಮ ಎಂಬ ಹೆಂಡತಿ ಇದ್ದರು. ಅವರಿಗೆ ಬಸವಯ್ಯ, ಬೋರಯ್ಯ, ಬೆಟ್ಟಯ್ಯ ಎಂದು ಮೂರು ಜನ ಮಕ್ಕಳು. ನಿಪಿ-1 ರಲ್ಲಿ ನಂಜಯ್ಯನಿಗೆ ಮೂರನೇ ಜನ ಮಕ್ಕಳು ಎಂದು ಬರೆಸಿರುತ್ತೇವೆ. ನಮ್ಮ ತಂದೆ ಮತ್ತು ಅವರ ಸಹೋದರರು ಬಹಳ ಹಿಂದೆಯೇ ವಿಭಾಗ ಮಾಡಿ ಕೊಂಡಿರುತ್ತಾರೆ. ನಿಪಿ-2 ಆಗುವ ಮೊದಲೇ ಅವರೆಲ್ಲರೂ ವಿಭಾಗ ಮಾಡಿ ಕೊಂಡಿದ್ದರು. ಈ ದಾವೆಯನ್ನು ಬಸವಯ್ಯ, ಬೋರಯ್ಯ, ಬೆಟ್ಟಯ್ಯ ಈಗ ಬೇರೆ ಬೇರೆಯಾಗಿ ವಾಸವಾಗಿರುತ್ತಾರೆ ಎಂದರೆ ಸರಿ. ನಮ್ಮ ತಾತ ನಂಜಯ್ಯನಿಗೆ ವಿಭಾಗದಲ್ಲಿ 10 ಗುಂಟೆ ಜಮೀನು ಬಂದಿದೆ. ಸರ್ವೆನಂಬರ್ ಗೊತ್ತಿಲ್ಲ. ನಮ್ಮ ತಂದೆ ಮತ್ತು ಅವರ ಸೋದರರು ವಿಭಾಗದಲ್ಲಿ ಯಾವುದೇ ಭಾಗವನ್ನು ತೆಗೆದು ಕೊಂಡಿಲ್ಲ. ನಮ್ಮ ತಂದೆಯ ಹೆಸರು ಬೋರಯ್ಯ, ಬೋರಯ್ಯನಿಗೆ ನಾವು ಬೋರಲಿಂಗಯ್ಯ, ನಿಂಗಮ್ಮ, ಹುಚ್ಚಮ್ಮ, ನಿಂಗಪ್ಪ, ಗಂಗಮ್ಮ, ಗಂಗಯ್ಯ ಎಂಬ ಮಕ್ಕಳು ಇದ್ದೇವೆ. ಅದರಲ್ಲಿ ಮೂರು ಜನ ತೀರಿ ಕೊಂಡಿರುತ್ತಾರೆ, ಅವರಿಗೆ ಮದುವೆಯಾಗಿತ್ತು ಮಕ್ಕಳು ಇದ್ದಾರೆ.

ಹುಚ್ಚಮ್ಮನಿಗೆ ಮೂರು ಜನ ಹೆಣ್ಣು ಮಕ್ಕಳು, 4 ಜನ ಗಂಡು ಮಕ್ಕಳು ಇದ್ದಾರೆ. ನಿಂಗಮ್ಮನಿಗೆ 4 ಜನ ಗಂಡು ಜನ ಮಕ್ಕಳು,ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಗಂಗಮ್ಮನಿಗೆ ಒಂದು ಗಂಡು ಹಾಗೂ ಒಂದು ಹೆಣ್ಣು ಇರುತ್ತದೆ. ನಿಪಿ-16 ರಂತೆ ನಾನು ಮತ್ತು ನನ್ನ ಇಬ್ಬರು ಸಹೋದರರು ವಿಭಾಗ ಮಾಡಿ ಕೊಂಡಿರುತ್ತೇವೆ. ಪಂಚಾಯ್ತಿ ಪಾರೀಕತ್ ನ್ನು ತಂದು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾವು ವಿಭಾಗ ಆದಾಗಿನಿಂದ ಪ್ರತ್ಯೇಕವಾಗಿ ವಾಸವಾಗಿರುತ್ತೇವೆ. ನನ್ನ ಪ್ರಕಾರ ಪರೀಕತ್ ನಲ್ಲಿ ನಮೂದು ಮಾಡಿರುವ ಸ.ನಂ. ಗಳಲ್ಲಿ

ನಾವು ಸ್ವಾಧೀನ ಅನುಭವದಲ್ಲಿ ಇದ್ದೇವೆ. ದಿಃ 03-05-1990 ರ ಪರೀಕತ್ ಕೈಯ್ಯಲ್ಲಿ ಬರವಣಿಯನ್ನು ಮಾಡಲಾಗಿತ್ತು. ಸದರಿ ಪರೀಕತ್ ನಲ್ಲಿ ಕುಟುಂಬದ ಎಲ್ಲಾ ಅಸ್ತಿಗಳನ್ನು ಸೇರಿಸಿ ಕೊಂಡಿರುತ್ತೇವೆ. ಪಾರೀಕತ್ ನನ್ನ ಬಳಿಇದೆ ಮುಂದಿನ ಮುದ್ದತ್ತಿನಲ್ಲಿ ಹಾಜರುಪಡಿಸುತ್ತೇನೆ. ಸ.ನಂ. 16 ರಲ್ಲಿ 2 ಎಕರೆ 33 ಗುಂಟೆ, ಸ.ನಂ. 17 ರಲ್ಲಿ 3 ಎಕರೆ 38 ಗುಂಟೆ ಜಮೀನು ನಮ್ಮ ಕುಟುಬಂಕ್ಕೆ ಇದೆ.ಸ.ನಂ. 16 ರಲ್ಲಿ 1 ಎಕರೆ 17 ಗುಂಟೆ, ಸ.ನಂ.17 ರಲ್ಲಿ 25 ಗುಂಟೆ ಜಮೀನು ನನಗೆ ಬಂದಿರುತ್ತದೆ.

ಸ.ನಂ. 15 ನ್ನು ನಾನು ನೋಡಿರುತ್ತೆನೆ, ಅದು ಒಟ್ಟು 6 ಎಕರೆ 14 ಗುಂಟೆ ವಿಸ್ತಿರ್ಣದಲ್ಲಿ ಇದೆ. ಸ.ನಂ. 15 ರಲ್ಲಿ ಮುದ್ದಲಿಂಗಯ್ಯ ಮತ್ತು ಅವರ ವಾರಸುದಾರರು ಅನುಭವದಲ್ಲಿ ಇದ್ದಾರೆ. ಅವರುಗಳನ್ನು ಈ ದಾವೆಯಲ್ಲಿ ಸೇರಿಸಿರುತ್ತೇವೆ. ಮುದ್ದಲಿಂಗಯ್ಯ ಈಗ ಬದುಕಿಲ್ಲ, ಅವರಿಗೆ ಗಂಗಾಧರಯ್ಯ, ಬೋರಯ್ಯ, ಕುನ್ನೇಗೌಡ, ಲೋಕೇಶ್ ಎಂದು 4 ಜನ ಗಂಡು ಮಕ್ಕಳು , ನಾಗಮ್ಮ, ಗೌರಮ್ಮ, ಇನ್ನೊಬ್ಬರ ಹೆಸರು ನೆನಪಿಲ್ಲ ಒಟ್ಟು 3 ಜನ ಹೆಣ್ಣು ಮಕ್ಕಳು. ಸ.ನಂ.15 ರ ಉತ್ತರಕ್ಕೆ ಸ.ನಂ.16 ರ ಜಮೀನು, ಪೂರ್ವಕ್ಕೆ ಸ.ನಂ. 17 ರ ಜಮೀನು, ಉತ್ತರಕ್ಕೆ -18 ರ ಜಮೀನು ಬರುತ್ತವೆ.

ಸ.ನಂ. 15, 16, 17 ರ ಎಲ್ಲಾ ಆಸ್ತಿಗಳ ಮೂಲವಾಗಿ ಪ್ರತಿವಾದಿಯ ತಾತ ಬೆಟ್ಟಯ್ಯನಿಗೆ ಸಂಬಂಧಿಸಿದ್ದವು. ನನ್ನ ಪ್ರಕಾರ ಬೆಟ್ಟಯ್ಯ ಮತ್ತು ನಂಜಯ್ಯ ಅಣ್ಣ ತಮ್ಮಂದಿರು. ತಾಲ್ಲೂಕು ಕಛೇರಿಯವರು ನೀಡುವ ನಿಪಿ-1 ಕ್ಕೆ ಸಂಬಂಧಿಸಿದಂತೆ ವಂಶವೃಕ್ಷವನ್ನು ತಂದು ಹಾಕಲು ನಮಗೆ ತೊಂದರೆ ಇಲ್ಲ. ಬೆಟ್ಟಯ್ಯ ಮರಣ ಹೊಂದಿದ ನಂತರ ಈ ಎಲ್ಲಾ ಆಸ್ತಿಗಳು ಅವರ ಮಗ ಬಸವಯ್ಯನಿಗೆ ಬಂದಿರುತ್ತವೆ. ಬಸವಯ್ಯನ ಹೆಂಡತಿಯ ಹೆಸರು ಹುಚ್ಚಮ್ಮ ಎಂದರೆ ಸರಿ. ಅವರಿಗೆ 4 ಜನ ಮಕ್ಕಳು. ಪ್ರೇಮ ಎಂಬ ಹೆಣ್ಣು ಮಗಳು ಬಸವಯ್ಯನಿಗೆ ಇದ್ದಳು ಎಂದರೆ ಸರಿ. ಸದರಿ ಪ್ರೇಮ ಈಗ ಬಂದುಕಿರುವುದಿಲ್ಲ, ಅವರ ಗಂಡ ಮಕ್ಕಳು ಬದುಕಿದ್ದಾರೆ ಅವರನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ. ಪಾರೀಕತ್ ನಲ್ಲಿ ಸ.ನಂ. ಗಳನ್ನು ತಿದ್ದುಪಡಿ ಮಾಡಿರುವುದಿಲ್ಲ.

ಸ.ನಂ.18 ರ ಜಮೀನನ್ನು ನೋಡಿರುತ್ತೇನೆ. ಅದರಲ್ಲಿ 5 ಪೋಡಾಗಳಾಗಿವೆ. ಸದರಿ ಪೊಡಾಗಲು ನಾನು ಅರ್ಜಿ ಯನ್ನು ಕೊಟ್ಟಿರುತ್ತೇನೆ. ನಮ್ಮ ಪಾರೀಕತ್ ನಲ್ಲಿ ಆಗಲೀ ಇತರೆ ಯಾವುದೇದಾಖಲೆಗಳಲ್ಲೂ ಸ.ನಂ.18 ನಮೂದು ಇಲ್ಲ ಎಂದರೆ ಸರಿ. ಸದರಿ ಸ.ನಂ.18 ರ ಋಣಭಾರವನ್ನು ನಾನು ನೋಡಿದ್ದು ಅದನ್ನು ನ್ಯಾಯಾಲಯಕ್ಕೆ ತಂದು ಹಾಕುಲುನನಗೆ

ತೊಂದರೆ ಇರುವುದಿಲ್ಲ.

(ಮುಂದುವರಿದ ಪಾಟೀಸವಾಲಿಗೆ ವಕೀಲರು ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ.ಹೇ.ಕೇ. ಸರಿ ಇದೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ
ಕುಣಿಗಲ್.